ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಒ25521**

**ಕಂಪನಿ ಅಧಿಕೃತ ಕಛೇರಿ:** ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009.

**ಸಂಖ್ಯೆ:ಕವಿಪ್ರನಿನಿ/ಬಿಆರ್‌ಎ/ಎಸ್‌ಎ3/6795/2007-08** **ದಿನಾಂಕ:** 16 APR 2020

## ಸುತ್ತೋಲೆ

**ವಿಷಯ:** ಇಲಾಖಾ ಪದೋನ್ನತಿ ಸಮಿತಿಗಳ ಸಭೆಗಳ ಮತ್ತು ಅಧಿಕಾರಿಗಳ/ನೌಕರರ ಸೇವಾ ಜೇಷ್ಠತಾ ಪಟ್ಟಿಗಳ ಪ್ರಕಟಣೆಯ ಬಗ್ಗೆ.

**ಉಲ್ಲೇಖ:** ನಿಗಮದ ಆದೇಶ ಸಂಖ್ಯೆ:ಕವಿಪ್ರನಿನಿ/ಎಸ್‌ಎ3/6795/2007-08 ದಿನಾಂಕ: 27.02.2008.

-----

ರಾಜ್ಯಾವಾರು/ವಲಯಾವಾರು/ವೃತ್ತಾವಾರು/ವಿಭಾಗಾವಾರು ಪದವೃಂದದ ಅಧಿಕಾರಿಗಳ/ ನೌಕರರ ಪದೋನ್ನತಿಗಳನ್ನು ಪರಿಗಣಿಸಲು ನಿಗಮವು ವಿವಿಧ ಹಂತಗಳಲ್ಲಿ ಇಲಾಖಾ ಪದೋನ್ನತಿ ಸಮಿತಿಗಳನ್ನು ರಚಿಸಿದ್ದು, ಇಲಾಖಾ ಪದೋನ್ನತಿ ಸಮಿತಿಯು ಸಭೆಗಳನ್ನು ನಡೆಸುವ ಮತ್ತು ಅನುಸರಿಸಬೇಕಾದ ಕ್ರಮಗಳ ವಿಷಯಗಳಲ್ಲಿ ಹಾಗೂ ಸ್ಥಳನಿಯುಕ್ತಿಯ ವಿಷಯಗಳಲ್ಲಿ ನೇಮಕಾತಿ ಪ್ರಾಧಿಕಾರಗಳಿಗೆ/ಪದೋನ್ನತಿ ಪ್ರಾಧಿಕಾರಗಳಿಗೆ/ವರ್ಗಾವಣಾ ಪ್ರಾಧಿಕಾರಗಳಿಗೆ ಉಲ್ಲೇಖದ ಆದೇಶದಲ್ಲಿ ಹಲವು ಮಾರ್ಗಸೂಚಿಗಳನ್ನು ನೀಡಿರುತ್ತದೆ. ಈ ವಿಷಯವನ್ನು ನಿಗಮವು ಪ್ರಸ್ತುತ ಸಂದರ್ಭಗಳಲ್ಲಿ ಮರು ಪರಿಶೀಲಿಸಿದ್ದು, ಈ ಕೆಳಕಂಡ ಪರಿಷ್ಕೃತ ಮಾರ್ಗಸೂಚಿಗಳನ್ನು ನೀಡಿದೆ:

1. ರಾಜ್ಯಾವಾರು/ವಲಯಾವಾರು/ವೃತ್ತಾವಾರು/ವಿಭಾಗಾವಾರು ಪದವೃಂದದ ಸಿಬ್ಬಂದಿಯ ಸೇವಾ ಜೇಷ್ಠತಾ ಪಟ್ಟಿಗಳನ್ನು ಸಂಬಂಧಿಸಿದ ಪ್ರಾಧಿಕಾರಗಳು <u>ಪ್ರತೀ ವರ್ಷ ಜನವರಿ 1 ನೇ ತಾರೀಖಿನಂದು</u> ಪ್ರಕಟಿಸತಕ್ಕದ್ದು.
2. ಸಂಬಂಧಿಸಿದ ಇಲಾಖಾ ಪದೋನ್ನತಿ ಸಮಿತಿಯ ಅಧ್ಯಕ್ಷರು ಇಲಾಖಾ ಪದೋನ್ನತಿ ಸಮಿತಿಯ ಸಭೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಅಗತ್ಯತೆಗೆ ತಕ್ಕಂತೆ ಮಾಡುವುದು.
3. ಇಲಾಖಾ ಪದೋನ್ನತಿ ಸಮಿತಿ ಸಭೆಯ ಸಂಚಾಲಕರು ವಲಯ/ವೃತ್ತ/ವಿಭಾಗೀಯ ಪದವೃಂದದ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯನ್ನು ತಯಾರಿಸಲಾದ/ನಿರ್ವಹಿಸಲ್ಪಡುವ ಕಛೇರಿಯವರಾಗಿರಬೇಕು.
4. ತ್ರೈಮಾಸಿಕವಾಗಿ ಖಾಲಿಯಾದ/ ಖಾಲಿಯಾಗುವ ಹುದ್ದೆಗಳಿಗೆ ಹಾಗೂ ಅದಕ್ಕೆ ಶೇಕಡ 25 ರಷ್ಟು ಹೆಚ್ಚಿಗೆ ಸೇರಿಸಿ, ಜೇಷ್ಠತೆಯಲ್ಲಿ ಹಿರಿಯರಾದ ಅರ್ಹ ಸಿಬ್ಬಂದಿಗಳನ್ನು ಪರಿಗಣಿಸತಕ್ಕದ್ದು.
5. ಪದೋನ್ನತಿ ನಿಯಮಾವಳಿಗಳಂತೆ ಇಲಾಖಾ ಪದೋನ್ನತಿ ಸಮಿತಿ ಸಭೆಯು ಪ್ರತೀ ಸಿಬ್ಬಂದಿಯ ಅರ್ಹತೆಯನ್ನು ಪರಿಶೀಲಿಸಿ ಪದೋನ್ನತಿ ನಿಯಮಗಳಂತೆ ತೈನಾತಿಸತಕ್ಕದ್ದು.

6. ಪದೋನ್ನತಿಯ ಮೇರೆಗೆ, ಕವಿಪ್ರನಿನಿ ಕಾರ್ಯವ್ಯಾಪ್ತಿಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯವ್ಯಾಪ್ತಿಯ ಕಛೇರಿಗಳಿಗೆ ಸ್ಥಳನಿಯುಕ್ತಿಗೊಳಸಬೇಕಾದ ಸಂದರ್ಭಗಳಲ್ಲಿ ಸಂಬಂಧಿಸಿದ ಪ್ರಾಧಿಕಾರಗಳು ವಿದ್ಯುತ್ ಸರಬರಾಜು ಕಂಪನಿಗಳ ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಮಾಸಂ) ರವರ ಸಹಮತವನ್ನು ಪಡೆದು ಸಿಬ್ಬಂದಿಯನ್ನು ಸ್ಥಳನಿಯುಕ್ತಿಗೊಳಸುವುದು.

7. ಪದೋನ್ನತಿ ನೀಡಿ ನಿಯೋಜಿಸುವಾಗ, ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯವ್ಯಾಪ್ತಿಯ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಕವಿಪ್ರನಿನಿ ಕಾರ್ಯವ್ಯಾಪ್ತಿಯ ಕಛೇರಿಗಳಿಗೆ ಸ್ಥಳನಿಯುಕ್ತಿಗೊಳಸಬೇಕಾದ ಸಂದರ್ಭಗಳಲ್ಲಿ ಸಂಬಂಧಿಸಿದ ಪ್ರಾಧಿಕಾರಗಳು ನಿರ್ದೇಶಕರು(ಆಡಳಿತ ಮತ್ತು ಮಾಸಂ), ಕವಿಪ್ರನಿನಿ, ಬೆಂಗಳೂರು ರವರ ಸಹಮತವನ್ನು ಪಡೆದು ಸಿಬ್ಬಂದಿಯನ್ನು ಸ್ಥಳನಿಯುಕ್ತಿಗೊಳಸುವುದು.

8. ಸ್ವತಂತ್ರ ಪ್ರಭಾರ ಅಥವಾ ಹೆಚ್ಚುವರಿ ಪ್ರಭಾರ ನೀಡುವಾಗ ಕಡ್ಡಾಯವಾಗಿ ಜೇಷ್ಠತೆಯಲ್ಲಿ ಹಿರಿಯರಿಗೆ ನೀಡಲು ಮತ್ತು ಹಾಲಿ ಜಾರಿಯಲ್ಲಿರುವ ನಿಯಮ/ಕೋರ್ಟ್ ಆದೇಶಗಳಂತೆ ನಿಯಮಾನುಸಾರವೇ ಪರಿಗಣಿಸಲು ಸೂಚಿಸಿದೆ.

9. ಈ ಮೇಲಿನಂತೆ ಪದೋನ್ನತಿಯ ನಂತರ ಸ್ಥಳನಿಯುಕ್ತಿಗೊಳಸುವಾಗ, ಭಿನ್ನಾಭಿಪ್ರಾಯಗಳು ಕಂಡುಬಂದಲ್ಲಿ, ನಿರ್ದೇಶಕರು (ಆಡಳಿತ ಮತ್ತು ಮಾಸಂ), ಕವಿಪ್ರನಿನಿ, ಬೆಂಗಳೂರು ರವರಿಗೆ ಸಂಪೂರ್ಣ ವಿವರಣೆಗಳೊಂದಿಗೆ/ಸಭೆಯ ನಡುವಳಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸತಕ್ಕದ್ದು.

'ವ್ಯವಸ್ಥಾಪಕ ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ'

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ.)
ಕವಿಪ್ರನಿನಿ.

**ಪ್ರತಿಗಳು:**

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ / ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆಡಳಿತ ಮತ್ತು ಮಾ.ಸಂ.)/ ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ಎಸ್ಕಾಂ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಗಳು ಮಾಹಿತಿಗಾಗಿ:**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು. ಬೆಂಗಳೂರು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ. / ಎಸ್ಕಾಂ ಪ.ಜಾ. /ಪ. ಪಂ. ಅಧಿಕಾರಿಗಳ ಸಂಘ, ಬೆಂಗಳೂರು.